

ನನಗೆ ಆಕರ್ಷಣೆ ಮೂಡಲಿಲ್ಲ. ವಾಸ್ತವವಾಗಿ ಅವನು ನೋಡಲು ನಮ್ಮ ಮನೆಯಾಳಿಗಿಂತಲೂ ಸ್ಫುರದ್ರೂಪಿಯಾಗಿದ್ದರೂ ಯಾಕೋ ಆ ಅಯಸ್ಕಾಂತೀಯ ಸೆಳೆತ ಉಂಟಾಗಲೇ ಇಲ್ಲ. ಅಷ್ಟಕ್ಕೂ ಹುಡುಗ ಒಪ್ಪಿಗೆಯೇ ಎಂದು ಯಾರೂ ನನ್ನನ್ನು ಕೇಳಲಿಲ್ಲ. ಕೇಳಿದ್ದರೂ ಇಲ್ಲ ಎನ್ನುವ ದಾರ್ಷ್ಟ್ಯವೂ ನನಗಿರಲಿಲ್ಲ.

ಮದುವೆಯ ಸಕಲ ಸಿದ್ಧತೆಗಳು ನಡೆದವು. ಮನೆಮುಂದೆ ಚಪ್ಪರ ಎದ್ದಿತು. ಮನೆಯೊಳಗೆ ಸಂಭ್ರಮ ಗರಿಗೆದರಿತ್ತು. ಅಂಗಡಿ ಮನೆಯ ಮುಂದೆ ಮದುವೆಗೆ ಹಾಕಿದ್ದ ಚಪ್ಪರದಡಿಯೇ ಅಪ್ಪ ವ್ಯಾಪಾರ ಮುಂದುವರೆಸುತ್ತಲೇ ಮದುವೆಗೆ ಸಕಲ ಸಿದ್ಧತೆಗಳೂ ನಡೆಯುತ್ತಿದ್ದವು. ಮನೆಯ ಮುಂದಿನ ನಡುರಸ್ತೆಯಲ್ಲೇ ನಾಳೆ ಬೆಳಗ್ಗೆ ಕನ್ಯಾದಾನ ಮಾಡುವ ಸಕಲ